# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಭಾರತ ಸಂವಿಧಾನದ ಅನುಚ್ಛೇದ 16(4) ರ ಅನ್ವಯ ರಾಜ್ಯ ಸಿವಿಲ್ ಸೇವೆಗಳಿಗೆ ನೇರ ನೇಮಕಾತಿಯಲ್ಲಿ ಮೀಸಲಾತಿ.

---

**ಸರ್ಕಾರಿ ಆದೇಶ ಸಂಖ್ಯೆ.ಸಿಆಸುಇ 08 ಸೇಹಿಮ 95, ಬೆಂಗಳೂರು, ದಿನಾಂಕ 20-6-1995.**

ಓದಲಾಗಿದೆ:

1) ಸರ್ಕಾರಿ ಆದೇಶ ಸಂಖ್ಯೆ. ಸಿಆಸುಇ 56 ಸೇಹಿಮ 94, ದಿನಾಂಕ 5-11-1994.
2) ಸರ್ಕಾರಿ ಆದೇಶ ಸಂಖ್ಯೆ. ಸಿಆಸುಇ 19 ಸೇಹಿಮ 89, ದಿನಾಂಕ 12-7-1989.
3) ಸರ್ಕಾರಿ ಆದೇಶ ಸಂಖ್ಯೆ. ಸಿಆಸುಇ 19 ಸೇಹಿಮ 89, ದಿನಾಂಕ 22-7-1989.
4) ಸರ್ಕಾರಿ ಆದೇಶ ಸಂಖ್ಯೆ. ಸಕಇ 251 ಬಿಸಿಎ 94, ದಿನಾಂಕ 31-1-1995.

ಪ್ರಸ್ತಾವನೆ:

ಮೇಲೆ ಕಾಣಿಸಿದ ದಿನಾಂಕ 31-1-1995 ರ ಸರ್ಕಾರಿ ಆದೇಶದಲ್ಲಿ ಹಿಂದುಳಿದ ವರ್ಗದವರ ಮೀಸಲಾತಿ ಪ್ರಮಾಣವನ್ನು ಶೇಕಡಾ 50 ಕ್ಕೆ ನಿಗದಿಪಡಿಸಿದ ಹಿನ್ನೆಲೆಯಲ್ಲಿ, ರಾಜ್ಯ ಸಿವಿಲ್ ಸೇವೆಗಳ, ಸರ್ಕಾರದ ಅಧೀನದಲ್ಲಿ ಬರುವ [illegible]ಗಳ ಅಥವಾ ಹುದ್ದೆಗಳ ನೇಮಕಾತಿಯಲ್ಲಿ ಭಾರತ ಸಂವಿಧಾನದ 16(4) ನೇ ಅನುಚ್ಛೇದದ ಪ್ರಕಾರ ಅಳವಡಿಸಬೇಕಾದ ರೋಸ್ಟರ್ ಬಗ್ಗೆ ಪರಿಶೀಲಿಸಲಾಗಿದೆ.

ಅದರ ಪರಿಣಾಮವಾಗಿ, ಈ ಕೆಳಕಂಡ ಆದೇಶವನ್ನು ಹೊರಡಿಸಲಾಗಿದೆ.

## ಆ ದೇ ಶ

ಮೇಲಿನ (1) ರಲ್ಲಿ ಓದಲಾದ ದಿನಾಂಕ 5-11-1994 ರ ಆದೇಶವನ್ನು ರದ್ದುಪಡಿಸುತ್ತಾ, ಪರಿಶಿಷ್ಟ ಜಾತಿ : ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳಿಗೆ ರಾಜ್ಯ ಸಿವಿಲ್ ಸೇವೆಗಳ ನೇರ ನೇಮಕಗಳಲ್ಲಿ ಒದಗಿಸಲಾಗಿರುವ ಪರಿಷ್ಕೃತ ಮೀಸಲಾತಿಯನ್ನು ಜಾರಿಗೆ ತರಲು ಈ ಕೆಳಕಂಡಂತೆ ಆದೇಶಿಸಲಾಗಿದೆ.

1. ಪ್ರವರ್ಗ -I; ಪ್ರವರ್ಗ-II (ಎ); ಪ್ರವರ್ಗ- II(ಬಿ); ಪ್ರವರ್ಗ-III(ಎ); ಪ್ರವರ್ಗ-III(ಬಿ) ಮುಂತಾದ ಪದಸಮೂಹಗಳು ಸರ್ಕಾರಿ ಆದೇಶ ಸಂಖ್ಯೆ.ಸಕಇ 150 ಬಿಸಿಎ 94, ದಿನಾಂಕ 17-9-1994 ರಲ್ಲಿನ ವರ್ಗೀಕರಣದ ಅರ್ಥವನ್ನೇ ಹೊಂದಿರುತ್ತದೆ. ಈ ಇತರೆ ಹಿಂದುಳಿದವರನ್ನು ವರ್ಗೀಕರಣದ ಉದ್ದೇಶಕ್ಕಾಗಿ ಸಮಾಜ ಕಲ್ಯಾಣ ಇಲಾಖೆಯಿಂದಾಗ್ಗೆ ಹೊರಡಿಸುವ ಆದೇಶಗಳಲ್ಲಿ ನೀಡುವ ವರ್ಗೀಕರಣವನ್ನೇ ಅನುಸರಿಸತಕ್ಕದ್ದು. ನೇರ ನೇಮಕಗಳಲ್ಲಿ ಮೀಸಲಾತಿಯನ್ನು ಮೇಲಿನ (4) ರಲ್ಲಿ ಓದಲಾಗಿರುವ ಆದೇಶದಲ್ಲಿ ನಿಗದಿಪಡಿಸಿದ ಶೇಕಡಾವಾರಿನಲ್ಲಿ ಪ್ರತಿಯೊಂದು ನೇಮಕಾತಿ ಪ್ರಾಧಿಕಾರದಡಿಯಲ್ಲಿನ ಪ್ರತಿಯೊಂದು ವೃಂದಕ್ಕೂ ಅನ್ವಯಿಸತಕ್ಕದ್ದು. ಪರಿಶಿಷ್ಟ ಜಾತಿ : ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳ ಸಮೂಹದವರಿಗೆ ಮೀಸಲಿರಿಸಬೇಕಾದ ರಿಕ್ತ ಸ್ಥಾನಗಳ ಮೊತ್ತವನ್ನು, ಈ ಆದೇಶಕ್ಕೆ ಲಗತ್ತಿಸಿರುವ ಅನುಬಂಧದಲ್ಲಿರುವಂತೆ 100 ರಿಕ್ತ ಸ್ಥಾನಗಳ ರೋಸ್ಟರ್ ಆಧಾರದ ಮೇಲೆ ಲೆಕ್ಕ ಮಾಡತಕ್ಕದ್ದು. ಪ್ರತಿಯೊಂದು ನೇಮಕಾತಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಬರುವ ಪ್ರತಿಯೊಂದು ವೃಂದಕ್ಕೆ ಸಂಬಂಧಿಸಿದಂತೆ ಪ್ರತ್ಯೇಕವಾಗಿ

......2

ಈ ರೋಸ್ಟರಿನ ಒಂದನೇ ಬಿಂದುವಿನಿಂದ ಪ್ರಾರಂಭವಾಗುವಂತೆ ರೋಸ್ಟರನ್ನು ಅಳವಡಿಸಿಕೊಳ್ಳಬೇಕು. ನೇರ ನೇಮಕಾತಿ ರಿಕ್ತ ಸ್ಥಾನಗಳನ್ನು ರೋಸ್ಟರಿನ ಒಂದನೇ ಬಿಂದುವಿನಿಂದ ಪ್ರಾರಂಭಿಸಿ 100 ನೇ ಬಿಂದುವಿನವರೆಗೂ ಸಂಬಂಧಿಸಿದ ಆಯಾ ಗುಂಪಿನ ಅಭ್ಯರ್ಥಿಗಳಿಂದ ಆಯ್ಕೆ ಮಾಡಿ ಭರ್ತಿ ಮಾಡತಕ್ಕದ್ದು. ಉದಾಹರಣೆಗೆ; ಈ ಆದೇಶದ ನಂತರದ ಮೊದಲನೇ ನೇಮಕಾತಿಯಲ್ಲಿ 21 ನೇ ರಿಕ್ತ ಸ್ಥಾನದವರೆಗೆ ಭರ್ತಿ ಮಾಡಲ್ಪಟ್ಟರೆ; ಮುಂದಿನ ನೇಮಕಾತಿಯಲ್ಲಿ ರೋಸ್ಟರನ್ನು 22ನೇ ಬಿಂದುವಿನಿಂದ ಚಾಲನೆಗೊಳಿಸತಕ್ಕದ್ದು. ನಂತರದ ನೇಮಕಾತಿಗಳಲ್ಲಿಯೂ ಇದೇ ಪದ್ಧತಿಯನ್ನು 100 ನೇ ರಿಕ್ತ ಸ್ಥಾನ ಭರ್ತಿ ಆಗುವವರೆಗೂ ಅನುಸರಿಸತಕ್ಕದ್ದು. 100 ರಿಕ್ತ ಸ್ಥಾನಗಳನ್ನು ಭರ್ತಿ ಮಾಡಿದ ನಂತರ ರೋಸ್ಟರಿನ ಮೊದಲನೇ ಬಿಂದುವಿನಿಂದ ಪುನರಾರಂಭಿಸತಕ್ಕದ್ದು. ಪರಿಶಿಷ್ಟ ಜಾತಿ : ಪರಿಶಿಷ್ಟ ಪಂಗಡದ ಬ್ಯಾಕಲಾಗನ್ನು ಹೊರತುಪಡಿಸಿ ದಿನಾಂಕ 5-11-1994 ಅಥವಾ ಅದಕ್ಕೆ ಹಿಂದೆ ಜಾರಿಯಲ್ಲಿದ್ದ ಸರ್ಕಾರಿ ಆದೇಶಗಳನುಸಾರ ವರ್ಗೀಕರಿಸಲ್ಪಟ್ಟು ಭರ್ತಿಯಾಗದೇ ಆ ಆದೇಶ ಜಾರಿಗೆ ಬಂದ ದಿನಾಂಕದಂದು ಉಳಿದುಕೊಂಡಿರುವ ಎಲ್ಲಾ ರಿಕ್ತ ಸ್ಥಾನಗಳೂ ಆ ವರ್ಗೀಕರಣವನ್ನು ಕಳೆದುಕೊಳ್ಳುತ್ತವೆ ಮತ್ತು ಅವುಗಳನ್ನು ಹೊಸ ರಿಕ್ತ ಸ್ಥಾನಗಳೆಂದು ಪರಿಗಣಿಸತಕ್ಕದ್ದು. ಈ ಸರ್ಕಾರಿ ಆದೇಶದಲ್ಲಿ ನಿಗದಿಪಡಿಸಲಾದ ರೋಸ್ಟರ್ ಅಂತಹಾ ರಿಕ್ತ ಸ್ಥಾನಗಳಿಗೆ ಮತ್ತು ಇನ್ನು ಮುಂದೆ ಉದ್ಭವಿಸುವ ರಿಕ್ತ ಸ್ಥಾನಗಳಿಗೆ ಅನ್ವಯಿಸತಕ್ಕದ್ದು.

2. ಪ್ರತಿಯೊಂದು ಸಮೂಹದಲ್ಲಿ ಅಂದರೆ, ಸಾಮಾನ್ಯ ವರ್ಗ; ಪರಿಶಿಷ್ಟ ಜಾತಿ : ಪರಿಶಿಷ್ಟ ಪಂಗಡ : ಇತರೆ ಹಿಂದುಳಿದ ವರ್ಗಗಳ ಪ್ರತಿ ಸಮೂಹದಲ್ಲಿ ಪ್ರತಿ ಹತ್ತನೇ ರಿಕ್ತ ಸ್ಥಾನವನ್ನು ಕರ್ನಾಟಕ ಸಿವಿಲ್ ಸೇವೆಗಳು (ಸಾಮಾನ್ಯ ನೇಮಕಾತಿ) ನಿಯಮಗಳು; 1977 ರ ನಿಯಮ 9 ರ ಉದ್ದೇಶಕ್ಕಾಗಿ ಮಾಜಿ ಸೈನಿಕರಿಗೆ ಮೀಸಲಿಡತಕ್ಕದ್ದು.

3. ಆಯ್ಕೆ ಪ್ರಾಧಿಕಾರಿಯು ನೇಮಕಾತಿ ನಿಯಮಾನುಸಾರ ಒಂದೇ ವರ್ಗದ ಹುದ್ದೆಗಳ ಮುಖ್ಯ ಪಟ್ಟಿ ಮತ್ತು ಹೆಚ್ಚುವರಿ ಪಟ್ಟಿಯನ್ನು ಸಿದ್ಧಪಡಿಸಬೇಕಾದ ಸಂದರ್ಭಗಳಲ್ಲಿ; ರೋಸ್ಟರನ್ನು ಪ್ರತ್ಯೇಕವಾಗಿ ಅಳವಡಿಸುತ್ತಾ ಎರಡು ಪಟ್ಟಿಗಳನ್ನು ಪ್ರತ್ಯೇಕವಾಗಿ ಸಿದ್ಧಪಡಿಸತಕ್ಕದ್ದು. ಪರಿಶಿಷ್ಟ ಜಾತಿ : ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳ ಪ್ರತಿ ಗುಂಪಿಗೆ ಮೀಸಲಿರಿಸಬೇಕಾದ ರಿಕ್ತ ಸ್ಥಾನಗಳ ಸಂಖ್ಯೆಯನ್ನು ರೋಸ್ಟರ್ ಅನುಸಾರ ಲೆಕ್ಕಹಾಕತಕ್ಕದ್ದು ಮತ್ತು ಮುಖ್ಯ ಪಟ್ಟಿ ಮತ್ತು ಹೆಚ್ಚುವರಿ ಪಟ್ಟಿಯಲ್ಲಿ ಆಯ್ಕೆ ಮಾಡಬೇಕಾದ ಅಭ್ಯರ್ಥಿಗಳ ಸಂಖ್ಯೆಯನ್ನು ನೇಮಕಾತಿ ಪ್ರಾಧಿಕಾರಿ ಆಯ್ಕೆ ಪ್ರಾಧಿಕಾರಕ್ಕೆ ಸ್ಪಷ್ಟವಾಗಿ ತಿಳಿಸತಕ್ಕದ್ದು.

4. ಪ್ರಕಟಿತ ರಿಕ್ತ ಸ್ಥಾನಗಳ ಸಂಖ್ಯೆಗಿಂತ ಲಭ್ಯವಾಗುವ ಅಭ್ಯರ್ಥಿಗಳು ಕಡಿಮೆ ಇದ್ದರೆ; ಪರಿಶಿಷ್ಟ ಜಾತಿ : ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳಿಗೆ ಮೀಸಲಾತಿಯು ವಾಸ್ತವವಾಗಿ ಆಯ್ಕೆ ಮಾಡಿಕೊಳ್ಳಲಾದ ಅಭ್ಯರ್ಥಿಗಳ ಸಂಖ್ಯೆಗನುಗುಣವಾಗಿರತಕ್ಕದ್ದು.

5. ಈ ಆದೇಶದಲ್ಲಿ ಒದಗಿಸಲಾದ ಮೀಸಲಾತಿಯನ್ನು ಸರಿಯಾಗಿ ಜಾರಿಗೊಳಿಸಲು ಅನುಸರಿಸಬೇಕಾದ ಆಯ್ಕೆ ವಿಧಾನವನ್ನು ಈ ಆದೇಶದ ಅನುಬಂಧ - 2 ರಲ್ಲಿ ವಿವರಿಸಲಾಗಿದೆ. ಇದನ್ನು ಲೋಕಸೇವಾ ಆಯೋಗ ಮತ್ತು ಇತರೆ ಆಯ್ಕೆ ಪ್ರಾಧಿಕಾರಿಗಳು ಅನುಸರಿಸತಕ್ಕದ್ದು.

6. ಒಂದು ವೇಳೆ, ಯಾವುದೇ ವರ್ಗದ ಹುದ್ದೆಗೆ ಮಾಡಲಾದ ನೇಮಕಾತಿಯಲ್ಲಿ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಸೂಕ್ತ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದಲ್ಲಿ, ಅವರಿಗಾಗಿ ಮೀಸಲಾದ ರಿಕ್ತ ಸ್ಥಾನಗಳನ್ನು ಮೀಸಲಾತಿಯಿಂದ ವಿಮುಕ್ತಿಗೊಳಿಸುವಂತಿಲ್ಲ ಮತ್ತು ಈ ರಿಕ್ತ ಸ್ಥಾನಗಳನ್ನು ತುಂಬುವಲ್ಲಿ ಮೇಲೆ (2) ಮತ್ತು (3) ರಲ್ಲಿ ಓದಲಾಗಿರುವ ಸರ್ಕಾರಿ ಆದೇಶಗಳ ಸಂಖ್ಯೆ: ಸಿಆಸುಇ 19 ಸೆಹಿಮ 89 ದಿನಾಂಕ: 12-7-1989 ಮತ್ತು 22-7-1989 ರಲ್ಲಿ ಹೇಳಲಾಗಿರುವ ಪದ್ಧತಿಯನ್ನು ಯಥಾವತ್ತಾಗಿ ಅನುಸರಿಸತಕ್ಕದ್ದು.

7. ಈ ಆದೇಶದಲ್ಲಿ, ಪ್ರವರ್ಗ- I, ಪ್ರವರ್ಗ-II (ಎ), ಪ್ರವರ್ಗ- II(ಬಿ), ಪ್ರವರ್ಗ- III(ಎ) ಮತ್ತು ಪ್ರವರ್ಗ- III (ಬಿ) ಇವರುಗಳಿಗಾಗಿ ಗುರುತಿಸಲ್ಪಟ್ಟ ಆದರೆ ಅಂಥಾ ವರ್ಗದ ಅರ್ಹ ಅಭ್ಯರ್ಥಿಗಳ ಲಭ್ಯತೆಯಲ್ಲಿನ ಕೊರತೆಯಿಂದಾಗಿ ಭರ್ತಿ ಮಾಡಲಾಗದ ರಿಕ್ತ ಸ್ಥಾನಗಳನ್ನು ಸಾಮಾನ್ಯ ವರ್ಗದ ಅಭ್ಯರ್ಥಿಗಳಿಂದ ಭರ್ತಿ ಮಾಡತಕ್ಕದ್ದು ಮತ್ತು ಈ ರೀತಿ ನಷ್ಟಗೊಂಡ ರಿಕ್ತ ಸ್ಥಾನಗಳನ್ನು ಮುಂದಿನ ಮತ್ತು ತದನಂತರದ ನೇಮಕಾತಿಗಳಲ್ಲಿ ಈ ಕೆಳಗೆ ಕಾಣಿಸಿದಂತೆ ಮುಂದಕ್ಕೆ ಕೊಂಡೊಯ್ಯತಕ್ಕದ್ದು.

8. ಅದೇ ಕ್ಯಾಲೆಂಡರ್ ವರ್ಷದಲ್ಲಿ ಅಥವಾ ನಂತರದ ಎರಡು ಕ್ಯಾಲೆಂಡರ್ ವರ್ಷಗಳಲ್ಲಿ ಅದೇ ವರ್ಗದ ಹುದ್ದೆಗಳಿಗೆ ಆಗುವ ನೇರ ನೇಮಕಾತಿಗಳಲ್ಲಿ ಈ ಆದೇಶದಲ್ಲಿ ನಿಗದಿಪಡಿಸಿದ ರೋಸ್ಟರ್ ಅನ್ವಯ ಮತ್ತು ನಿರ್ದಿಷ್ಟಪಡಿಸಲಾದ ವಿಧಾನದಲ್ಲಿ ಹಿಂದುಳಿದ ವರ್ಗಗಳವರಿಗೆ ರಿಕ್ತ ಸ್ಥಾನಗಳಲ್ಲಿ ಮೀಸಲಾತಿಯನ್ನು ನಿಗದಿಪಡಿಸತಕ್ಕದ್ದು. ಆದರೆ, ಇತರೆ ಹಿಂದುಳಿದ ವರ್ಗಗಳ ಅಭ್ಯರ್ಥಿಗಳ ಲಭ್ಯತೆಯಲ್ಲಿನ ಕೊರತೆಯಿಂದಾಗಿ ನೇಮಕಾತಿಯಲ್ಲಿ ಭರ್ತಿಯಾಗದೆ ಉಳಿದ ಮೇಲಿನ ಕಂಡಿಕೆ 7 ರನುಸಾರ ಮುಂದಕ್ಕೆ ಕೊಂಡೊಯ್ಯಲಾದ ರಿಕ್ತ ಸ್ಥಾನಗಳನ್ನು ಅನುಕ್ರಮವಾಗಿ ಸಂಬಂಧಿಸಿದ ಇತರ ಹಿಂದುಳಿದ ವರ್ಗಗಳ ಸಮೂಹಗಳಿಗೆ ಮುಂದಿನ ಆಯ್ಕೆಗಳಲ್ಲಿ ಸರಿದೂಗಿಸತಕ್ಕದ್ದು. ಈ ಉದ್ದೇಶಕ್ಕಾಗಿ ವಿವಿಧ ಇತರ ಹಿಂದುಳಿದ ವರ್ಗಗಳ ಸಮೂಹದವರಿಗೆ ಕಂಡಿಕೆ 7 ರನುಸಾರ ನಷ್ಟವಾದ ರಿಕ್ತ ಸ್ಥಾನಗಳನ್ನು ಮುಂದಿನ ತಕ್ಷಣದ ಅಥವಾ ನಂತರದ ನೇರ ನೇಮಕಾತಿಗಳಲ್ಲಿ ಸಾಮಾನ್ಯ ವರ್ಗದ ಗುಂಪಿನಲ್ಲಿ ಲಭ್ಯವಾಗುವ ರಿಕ್ತ ಸ್ಥಾನಗಳನ್ನು ಅಂಥಹಾ ಪ್ರತಿಯೊಂದು ಸಮೂಹಕ್ಕೂ ಒದಗಿಸುವ ಮೂಲಕ ನಷ್ಟವನ್ನು ಭರ್ತಿ ಮಾಡತಕ್ಕದ್ದು.

9. ಮೇಲಿನ ಕಂಡಿಕೆ 8 ರಲ್ಲಿ ಹೇಳಲಾದಂತೆ ಅಭ್ಯರ್ಥಿಗಳ ಕೊರತೆಯಿಂದಾಗಿ ಮೀಸಲಾತಿ ವರ್ಗಗಳ ರಿಕ್ತ ಸ್ಥಾನಗಳನ್ನು ಭರ್ತಿ ಮಾಡಲಾಗದೆಯೇ ಉಳಿದು ಹೋದ ಮತ್ತು ನಂತರದ ಆಯ್ಕೆಗಳಲ್ಲಿ ನಷ್ಟವನ್ನು ಭರ್ತಿ ಮಾಡಲು ಕೊಂಡೊಯ್ಯುವ ಪ್ರಕ್ರಿಯೆಯನ್ನು ಮೊದಲನೇ ಕ್ಯಾಲೆಂಡರ್ ವರ್ಷದ ಆಯ್ಕೆಗಳಲ್ಲಿ ಮತ್ತು ನಂತರದ ಎರಡು ಕ್ಯಾಲೆಂಡರ್ ವರ್ಷಗಳ ಆಯ್ಕೆಗಳಲ್ಲಿ ಮಾತ್ರ ಮುಂದುವರಿಸತಕ್ಕದ್ದು. ಮೂರನೇ ಕ್ಯಾಲೆಂಡರ್ ವರ್ಷದ ಅಂತ್ಯದಲ್ಲಿ ಯಾವುದೇ ಮೀಸಲಾತಿ ರಿಕ್ತ ಸ್ಥಾನವು ಹೊಂದಾಣಿಕೆಯಾಗದೆಯೇ ಉಳಿದುಕೊಂಡರೆ, ಅವು ವರ್ಗೀಕರಣವನ್ನು ಕಳೆದುಕೊಳ್ಳುತ್ತವೆ ಮತ್ತು ಮುಂದಿನ (ನಾಲ್ಕನೆಯ) ಕ್ಯಾಲೆಂಡರ್ ವರ್ಷದಲ್ಲಿ ಅವುಗಳನ್ನು ಹೊಸ ರಿಕ್ತ ಸ್ಥಾನಗಳೆಂದು ಪರಿಗಣಿಸಿ ರೋಸ್ಟರನ್ನು ಮುಂದುವರಿಸತಕ್ಕದ್ದು.

10. ಆಯ್ಕೆಯಾದ ಅಭ್ಯರ್ಥಿಗಳು ಕರ್ತವ್ಯಕ್ಕೆ ಹಾಜರಾಗದ ಕಾರಣ ಭರ್ತಿಯಾಗದೆಯೇ ಉಳಿದ ರಿಕ್ತ ಸ್ಥಾನಗಳನ್ನು ಹೊಸ ರಿಕ್ತ ಸ್ಥಾನಗಳೆಂದು ಪರಿಗಣಿಸತಕ್ಕದ್ದು.

11. ಮೀಸಲಾತಿ ಸೌಲಭ್ಯವನ್ನು ಪಡೆದುಕೊಳ್ಳುವಲ್ಲಿ ಮತ್ತು ಪರಿಶೀಲಿಸುವಲ್ಲಿ ಸರ್ಕಾರದಲ್ಲಿ ಸಮಾಜ ಕಲ್ಯಾಣ ಇಲಾಖೆ ಆಗಿಂದಾಗ್ಗೆ ಹೊರಡಿಸುವ ಮಾರ್ಗಸೂಚನೆಗಳನ್ನು ಅನುಸರಿಸತಕ್ಕದ್ದು.

12. ಸಂಬಂಧಿಸಿದ ಸರ್ಕಾರದ [illegible] [illegible]ಗಳು:

(i) ಸ್ಥಳೀಯ ಸಂಸ್ಥೆಗಳು;

(ii) ಸರ್ಕಾರದ ಸ್ವಾಮ್ಯಕ್ಕೆ ಅಥವಾ ನಿಯಂತ್ರಣಕ್ಕೊಳಪಡುವ ಹಾಗೂ ಕಂಪನಿ ಅಧಿನಿಯಮ; ಇತರ ಅಧಿನಿಯಮ; ನಿಯಮ ಇತ್ಯಾದಿಗಳಡಿ ಸ್ಥಾಪಿಸಲಾದ ಕಂಪನಿ, ಕಾರ್ಪೊರೇಷನ್; ಬೋರ್ಡ್; ನಿಗಮ ಇತ್ಯಾದಿ;

(iii) ಅಲ್ಪ ಸಂಖ್ಯಾತರ ಸಂಸ್ಥೆಗಳನ್ನು ಹೊರತುಪಡಿಸಿ ಸರ್ಕಾರದಿಂದ ಅನುದಾನ ಅಥವಾ ಸಹಾಯ ಪಡೆಯುವ ಸಂಸ್ಥೆಗಳು (ಇಲ್ಲಿ 'ಅನುದಾನ' ಅಥವಾ 'ಸಹಾಯ' ಎಂದರೆ ಸರ್ಕಾರ ನೀಡುವ ಆರ್ಥಿಕ ಮತ್ತು ಅಥವಾ ಇತರ ನೆರವು ಒಳಗೊಳ್ಳುವುದು)

ಇವುಗಳಿಗೆ ಅನ್ವಯವಾಗುವ ಸಂಬಂಧಿಸಿದ ಕಾನೂನುಗಳಡಿಯಲ್ಲಿ ಸೂಕ್ತ ಸೂಚನೆ : ಆದೇಶಗಳನ್ನು ಹೊರಡಿಸತಕ್ಕದ್ದು.

13. ಈ ಆದೇಶವು ತಕ್ಷಣದಿಂದ ಜಾರಿಗೆ ಬರುತ್ತದೆ. ಆದರೆ; ಯಾವುದೇ ವೃಂದದ ಹುದ್ದೆಗಳ ಸಂಬಂಧದಲ್ಲಿ ಈಗಾಗಲೇ ನೇರ ನೇಮಕಾತಿ ಪ್ರಕ್ರಿಯೆ ಪ್ರಾರಂಭಗೊಂಡಿದ್ದು ಈ ಆದೇಶ ಹೊರಡಿಸುವ ವೇಳೆಗೆ ಬಾಕಿಯಿದ್ದಲ್ಲಿ, ಆ ನೇರ ನೇಮಕಾತಿ ಪ್ರಕ್ರಿಯೆಯನ್ನು ಸಮಾಜ ಕಲ್ಯಾಣ ಇಲಾಖೆ ಪ್ರತ್ಯೇಕವಾಗಿ ಹೊರಡಿಸುವ ಆದೇಶದನ್ವಯ ಪೂರ್ಣಗೊಳಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ;

(ಎ.ಕೆ.ಎಂ. ನಾಯಕ್)
ಸರ್ಕಾರದ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ.

ಗೆ:

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ದಿನಾಂಕ:21-6-1995 ರ ವಿಶೇಷ --- ರಾಜ್ಯಪತ್ರದಲ್ಲಿ ಪ್ರಕಟಣೆಗಾಗಿ.

**ಪ್ರತಿ:**

1) ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು: ಕಾರ್ಯದರ್ಶಿಗಳು.
2) ಸರ್ಕಾರದ ಎಲ್ಲಾ ವಿಶೇಷ: ಅಪರ : ಸಹ ಕಾರ್ಯದರ್ಶಿಗಳು.
3) ಸರ್ಕಾರದ ಎಲ್ಲಾ ಉಪ : ಅಧೀನ ಕಾರ್ಯದರ್ಶಿಗಳು.
4) ಕಾರ್ಯದರ್ಶಿ, ಕರ್ನಾಟಕ ಲೋಕ ಸೇವಾ ಆಯೋಗ, ಬೆಂಗಳೂರು.
5) ಕಾರ್ಯದರ್ಶಿ, ಕರ್ನಾಟಕ [illegible] ಮಂಡಳಿ, ಬೆಂಗಳೂರು.
6) ರಿಜಿಸ್ಟ್ರಾರ್, ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು.
7) ರಿಜಿಸ್ಟ್ರಾರ್, ಕರ್ನಾಟಕ ಆಡಳಿತ ನ್ಯಾಯ ಮಂಡಳಿ, ಬೆಂಗಳೂರು.
8) ರಿಜಿಸ್ಟ್ರಾರ್, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
9) ವಾರಪತ್ರಿಕೆ.

([illegible] ಮುಂದುವರಿಕೆ).

Attn: Divyanand, Superintendent, Establishment Section.

13 DR

2

## ಕರ್ನಾಟಕ ಸರ್ಕಾರದ ನಡವಳಿ

ವಿಷಯ: ಸರ್ಕಾರಿ ಸೇವೆಗಳಿಗೆ ನೇರನೇಮಕಾತಿಯಲ್ಲಿ ವಿವಿಧ ಸಮುಹಗಳ ಮೀಸಲಾತಿಗಳನ್ನು ಕಾರ್ಯಗತಗೊಳಿಸುವ ಬಗ್ಗೆ ಸ್ಪಷ್ಟೀಕರಣ.

ಓದಲಾಗಿದೆ:-
1) ದಿನಾಂಕ: 20ನೇ ಮಾರ್ಚ್ 1995 ರ ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 08 ಸೇಹಿಮ 95.
2) ದಿನಾಂಕ: ನೇ ಆಗಸ್ಟ್ 1995 ರ ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 28 ಸೇನೆಸಿ 95.
3) ದಿನಾಂಕ: 6ನೇ ಮಾರ್ಚ್ 1996 ರ ಅಧಿಸೂಚನೆ ಸಂಖ್ಯೆ: ಡಿಪಿಎಆರ್ 34 ಎಸ್‌ಆರ್‌ಆರ್ 95.
4) ದಿನಾಂಕ: 23ನೇ ನವೆಂಬರ್ 2000ದ ಅಧಿಸೂಚನೆ ಸಂ: ಡಿಪಿಎಆರ್ 23 ಎಸ್.ಆರ್‌ಆರ್ 99.
5) 2000ದ ಕರ್ನಾಟಕ ಗ್ರಾಮೀಣ ಅಭ್ಯರ್ಥಿಗಳಿಗಾಗಿ (ರಾಜ್ಯ ಸಿವಿಲ್ ಸೇವೆಗಳಲ್ಲಿ) ನೇಮಕಾತಿಗಳ ಅಥವಾ ಹುದ್ದೆಗಳ ಮೀಸಲಾತಿ ವಿಧೇಯಕ.
6) ದಿನಾಂಕ: 13ನೇ ಫೆಬ್ರವರಿ 2001 ರ ಸರ್ಕಾರಿ ಆದೇಶ ಸಂ: ಸಿಆಸುಇ 06 ಸೇನೆಸಿ 2001.
7) ದಿನಾಂಕ: 24ನೇ ಅಕ್ಟೋಬರ್ 2002 ರ ಅಧಿಸೂಚನೆ ಸಂ: ಡಿಪಿಎಆರ್ 71 ಎಸ್‌ಆರ್‌ಆರ್ 2001.

- - -

**ಪ್ರಸ್ತಾವನೆ:-**

ಕ್ರಮ ಸಂಖ್ಯೆ (1) ರಲ್ಲಿ ಓದಲಾದ ದಿನಾಂಕ: 20ನೇ ಮಾರ್ಚ್, 1995 ರ ಸರ್ಕಾರಿ ಆದೇಶದಲ್ಲಿ ರಾಜ್ಯ ಸರ್ಕಾರಿ ಸೇವೆಗಳಲ್ಲಿ ನೇರನೇಮಕಾತಿಯಲ್ಲಿ ಭಾರತ ಸಂವಿಧಾನದ ಅನುಚ್ಛೇದ 16(4) ರ ಪ್ರಕಾರ ಅಳವಡಿಸಿ ಕೊಳ್ಳಬೇಕಾದ ಮೀಸಲಾತಿ ವಿಧಾನ ಮತ್ತು ಅದಕ್ಕಾಗಿ ಅನುಸರಿಸಬೇಕಾದ ರೋಸ್ಟರ್‌ನ್ನು ನಿಗಧಿಪಡಿಸಲಾಗಿದೆ. ಈ ಆದೇಶದ ಕಂಡಿಕೆ (2) ರಲ್ಲಿ ಕರ್ನಾಟಕ ಸಿವಿಲ್ ಸೇವೆಗಳು (ಸಾಮಾನ್ಯ ನೇಮಕಾತಿ) ನಿಯಮಗಳು, 1977 ರ ನಿಯಮ 9 ರನ್ವಯ ಮಾಜಿ ಸೈನಿಕರಿಗೆ ಶೇಕಡಾ 10 ರಷ್ಟು ಮೀಸಲಾತಿ ಬಗ್ಗೆ ಅವಕಾಶವನ್ನು ಕಲ್ಪಿಸಿದೆ.

2. ಕ್ರಮ ಸಂಖ್ಯೆ (2) ರಲ್ಲಿ ಓದಲಾದ ದಿನಾಂಕ: 19ನೇ ಆಗಸ್ಟ್, 1995 ರ ಆದೇಶದಲ್ಲಿ ಮೇಲೆ ಹೇಳಿದ ನಿಯಮಗಳ ನಿಯಮ 9(1ಎ) ಅನ್ವಯ ಅಂಗವಿಕಲರಿಗೆ ಶೇಕಡಾ 5 ರಷ್ಟು ಮೀಸಲಾತಿ ಬಗ್ಗೆ ಅವಕಾಶವನ್ನು ಕಲ್ಪಿಸಲಾಗಿದೆ.

3. ಕ್ರಮ ಸಂಖ್ಯೆ (3) ರಲ್ಲಿ ಓದಲಾದ, ದಿನಾಂಕ: 06-03-1996 ರ ಅಧಿಸೂಚನೆಯಲ್ಲಿ ಕರ್ನಾಟಕ ಸಿವಿಲ್ ಸೇವೆಗಳು (ಸಾಮಾನ್ಯ ನೇಮಕಾತಿ) ನಿಯಮಗಳು, 1977 ರ ನಿಯಮ 9ಕ್ಕೆ ಮಾಡಿರುವ ತಿದ್ದುಪಡಿ ನಿಯಮಗಳ ಅನ್ವಯ ರಾಜ್ಯ ಸರ್ಕಾರಿ ಸೇವೆಗಳಿಗೆ ಮಾಡುವ ಎಲ್ಲಾ ನೇರ ನೇಮಕಾತಿಯಲ್ಲಿ ಶೇಕಡಾ 30 ರಷ್ಟು ಸ್ಥಾನಗಳನ್ನು ಮಹಿಳಾ ಅಭ್ಯರ್ಥಿಗಳಿಂದ ಭರ್ತಿ ಮಾಡಲು ಅವಕಾಶ ಕಲ್ಪಿಸಲಾಗಿದೆ.

4. ಕ್ರಮ ಸಂಖ್ಯೆ (4) ರಲ್ಲಿ ಓದಲಾದ ದಿನಾಂಕ: 23-11-2000 ರ ಅಧಿಸೂಚನೆಯಲ್ಲಿ, ರಾಜ್ಯ ಸರ್ಕಾರಿ ಸೇವೆಗಳಲ್ಲಿನ ಗ್ರೂಪ್ - 'ಸಿ' ಮತ್ತು 'ಡಿ' ಹುದ್ದೆಗಳಿಗೆ ನೇರ ನೇಮಕಾತಿಗಾಗಿ ಶೇಕಡಾ 5 ರಷ್ಟು ರಿಕ್ತ ಸ್ಥಾನಗಳನ್ನು ಯೋಜನೆಗಳಿಂದ ನಿರಾಶ್ರಿತರಾದವರ ಕುಟುಂಬಗಳ ಅಭ್ಯರ್ಥಿಗಳಿಂದ ಭರ್ತಿ ಮಾಡಲು ಅವಕಾಶ ಕಲ್ಪಿಸಿದೆ.

5. ಕ್ರಮ ಸಂಖ್ಯೆ (5) ರಲ್ಲಿ ಓದಲಾದ ವಿಧೇಯಕದಲ್ಲಿ ರಾಜ್ಯ ಸರ್ಕಾರಿ ಸೇವೆಗಳಿಗೆ ಮಾಡುವ ಎಲ್ಲಾ ನೇರ ನೇಮಕಾತಿಯಲ್ಲಿ ಶೇಕಡಾ 25 ರಷ್ಟು ರಿಕ್ತ ಸ್ಥಾನಗಳನ್ನು ಗ್ರಾಮೀಣ ಅಭ್ಯರ್ಥಿಗಳಿಂದ ಭರ್ತಿ ಮಾಡಲು ಅವಕಾಶ ಕಲ್ಪಿಸಲಾಗಿದೆ.

6. ಇವುಗಳನ್ನು ಕಾರ್ಯಗತಗೊಳಿಸುವ ಸಂಬಂಧದಲ್ಲಿ ಕೆಲವು ಮಾರ್ಗ ಸೂಚನೆಗಳನ್ನು ಹೊರಡಿಸಲು ಸೂಕ್ತವೆಂದು ಸರ್ಕಾರವು ತೀರ್ಮಾನಿಸಿ, ಕ್ರಮ ಸಂಖ್ಯೆ (6) ರಲ್ಲಿ ಓದಲಾದ ದಿನಾಂಕ: 13-2-2001 ರ ಆದೇಶದಲ್ಲಿ ಮಾರ್ಗಸೂಚಿಗಳನ್ನು ಹೊರಡಿಸಿದೆ.

7. ಕ್ರಮ ಸಂಖ್ಯೆ (7) ರಲ್ಲಿ ಓದಲಾದ ದಿನಾಂಕ: 24-10-2002 ರ ಅಧಿಸೂಚನೆಯಲ್ಲಿ ರಾಜ್ಯ ಸರ್ಕಾರಿ ಸೇವೆಗಳಿಗೆ ಮಾಡುವ ಎಲ್ಲಾ ನೇರ ನೇಮಕಾತಿಯಲ್ಲಿ ಶೇಕಡಾ 5 ರಷ್ಟು ಸ್ಥಾನಗಳನ್ನು ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಅಭ್ಯರ್ಥಿಗಳಿಂದ ಭರ್ತಿ ಮಾಡಲು ಅವಕಾಶ ಕಲ್ಪಿಸಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 97 ಸೇನಿ 2002,

ಬೆಂಗಳೂರು, ದಿನಾಂಕ: 22-11-2002.

ಪ್ರಸ್ತಾವನೆಯಲ್ಲಿ ವಿವರಿಸಿರುವ ನಿಯಮಗಳ ಅವಕಾಶಗಳನ್ನು ಕಾರ್ಯಗತಗೊಳಿಸಲು ಕೆಳಕಂಡಂತೆ ಕ್ರಮ ತೆಗೆದುಕೊಳ್ಳತಕ್ಕದ್ದೆಂದು ಈ ಮೂಲಕ ಆದೇಶಿಸಿದೆ:-

1) ಪ್ರತಿ ಸಂದರ್ಭದಲ್ಲಿ, ನೇರ ನೇಮಕಾತಿಗೆ ಲಭ್ಯವಾಗುವ ರಿಕ್ತ ಸ್ಥಾನಗಳಲ್ಲಿ ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾಗಿರುವ ದಿನಾಂಕ 20ನೇ ಮಾರ್ಚ್, 1995 ರಂದು ಹೊರಡಿಸಿರುವ ಅಧಿಸೂಚನೆಯಲ್ಲಿರುವ ಮೀಸಲಾತಿ ಆದೇಶವನ್ನು; ಗಣನೆಗೆ ತೆಗೆದುಕೊಂಡು ಅವರಣದ ರಿಕ್ತ ಸ್ಥಾನಗಳನ್ನು ಸಾಮಾನ್ಯ ಅರ್ಹತೆ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಪ್ರತಿ ಹಿಂದುಳಿದ ವರ್ಗ, ಈ ವರ್ಗಗಳಲ್ಲಿ ಎಂದು ಗುರುತಿಸಿಕೊಳ್ಳತಕ್ಕದ್ದು;

2) ಜೊತೆಗೆ, ಕರ್ನಾಟಕ ಸಿವಿಲ್ ಸೇವೆಗಳು (ಸಾಮಾನ್ಯ ನೇಮಕಾತಿ) ನಿಯಮಗಳು, 1977 ರ ನಿಯಮ 9(1ಬಿ) ರನ್ವಯ ರಾಜ್ಯ ಸಿವಿಲ್ ಸೇವೆಗಳಲ್ಲಿ ಮಹಿಳೆಯರಿಗಾಗಿ ಕಾದಿರಿಸಿರುವ ಶೇಕಡಾ 30 ರಷ್ಟು ಸ್ಥಾನಗಳನ್ನು ನಿಗದಿಪಡಿಸಲು, ಉಪ ಕಂಡಿಕೆ (1) ರಲ್ಲಿ ಸೂಚಿಸಿರುವಂತೆ ವಿಂಗಡಿಸಿ ಸಾಮಾನ್ಯ ಅರ್ಹತೆ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಪ್ರತಿ ಹಿಂದುಳಿದ ವರ್ಗ, ಈ ಪ್ರತಿ ವರ್ಗಕ್ಕೆ ಪ್ರತ್ಯೇಕವಾಗಿ ಲಭ್ಯವಾಗುವ ರಿಕ್ತ ಸ್ಥಾನಗಳ ಸಮೂಹದಲ್ಲಿ ಪ್ರತಿ 20 ರ ಒಂದು ಗುಂಪಿನಲ್ಲಿ ಕ್ರಮ ಸಂಖ್ಯೆ: 2,5,8,12, 15 ಮತ್ತು 18ನೇ ಸ್ಥಾನಗಳನ್ನು ಮಹಿಳಾ ಅಭ್ಯರ್ಥಿಗಳಿಗಾಗಿ ಮೀಸಲಿರಿಸತಕ್ಕದ್ದು;

3) ಉಪ ಕಂಡಿಕೆ (2) ರಲ್ಲಿ ಸೂಚಿಸಿರುವ ನಿಯಮಗಳ ನಿಯಮ 9(1) ರನ್ವಯ ಮಾಜಿ ಸೈನಿಕರಿಗೆ ಶೇಕಡಾ 10 ರಷ್ಟು ಸ್ಥಾನಗಳನ್ನು ಮತ್ತು ನಿಯಮ (1ಎ) ರನ್ವಯ ಅಂಗವಿಕಲರಿಗೆ ಶೇಕಡಾ 5 ರಷ್ಟು ರಿಕ್ತ ಸ್ಥಾನಗಳನ್ನು ಮೀಸಲಿರಿಸಲಾಗಿದೆ. ಇವುಗಳನ್ನು ಕಾರ್ಯಗತಗೊಳಿಸುವ ಬಗ್ಗೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ದಿನಾಂಕ: 20ನೇ ಮಾರ್ಚ್, 1995 ರ ಆದೇಶದ ಕಂಡಿಕೆ 2 ರಲ್ಲಿ ಮತ್ತು ಕ್ರಮ ಸಂಖ್ಯೆ (2) ರಲ್ಲಿ ಓದಲಾದ ದಿನಾಂಕ: 19ನೇ ಆಗಸ್ಟ್ 1995 ರ ಆದೇಶದಲ್ಲಿ ಮಾರ್ಗಸೂಚಿಗಳನ್ನು ನೀಡಲಾಗಿದೆ. ಅಂದರೆ, ಇವರ ಪರಿಗಣನೆ ಉಪ ಕಂಡಿಕೆ (1) ರಲ್ಲಿ ಇದೇ ರೀತಿ ಸೂಚಿಸಿರುವಂತೆ ವಿಂಗಡಿಸಿ ಸಾಮಾನ್ಯ ಅರ್ಹತೆ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಪ್ರತಿ ಹಿಂದುಳಿದ ವರ್ಗ, ಈ ವರ್ಗಗಳಿಗೆ ಪ್ರತ್ಯೇಕವಾಗಿ ಲಭ್ಯವಾಗುವ ರಿಕ್ತ ಸ್ಥಾನಗಳ ಸಮೂಹದಲ್ಲಿ ಪ್ರತಿ ನೂರರ ಒಂದು ಗುಂಪಿನಲ್ಲಿ ಪ್ರತಿ ಹತ್ತನೇ ಸ್ಥಾನಗಳನ್ನು ಮಾಜಿ ಸೈನಿಕ ಅಭ್ಯರ್ಥಿಗಳಿಗಾಗಿ ಮತ್ತು ಪ್ರತಿ 19,39,59,79 ಮತ್ತು 99ನೇ ಸ್ಥಾನಗಳನ್ನು ಅಂಗವಿಕಲ ಅಭ್ಯರ್ಥಿಗಳಿಗಾಗಿ ಮೀಸಲಾಗಿರಿಸತಕ್ಕದ್ದು;

4) ಉಪ ಕಂಡಿಕೆ (1) ರಲ್ಲಿ ಸೂಚಿಸಿರುವಂತೆ ವಿಂಗಡಿಸಿ ಸಾಮಾನ್ಯ ಅರ್ಹತೆ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಪ್ರತಿ ಹಿಂದುಳಿದ ವರ್ಗ, ಈ ವರ್ಗಗಳಿಗೆ ಪ್ರತ್ಯೇಕವಾಗಿ ಲಭ್ಯವಾಗುವ ರಿಕ್ತ ಸ್ಥಾನಗಳ ಸಮೂಹದಲ್ಲಿ ಪ್ರತಿ 20 ರ ಒಂದು ಗುಂಪಿನಲ್ಲಿ ಪ್ರತಿ 17ನೇ ಸ್ಥಾನವನ್ನು ಯೋಜನೆಗಳಿಂದ

(18)

ನಿರಾಶ್ರಿತರಾದವರ ಕುಟುಂಬದವರ ಅಭ್ಯರ್ಥಿಗಳಿಗಾಗಿ ಮತ್ತು ಕ್ರ.ಸಂ. 3,6,9,13 ಮತ್ತು 16ನೇ ಸ್ಥಾನಗಳನ್ನು ಗ್ರಾಮೀಣ ಅಭ್ಯರ್ಥಿಗಳಿಗಾಗಿ ಮೀಸಲಿರಿಸತಕ್ಕದ್ದು;

5) ಉಪ ಕಂಡಿಕೆ (1) ರಲ್ಲಿ ಸೂಚಿಸಿರುವಂತೆ ವಿಂಗಡಿಸಿ ಸಾಮಾನ್ಯ ಅರ್ಹತೆ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಪ್ರತಿ ಹಿಂದುಳಿದ ವರ್ಗ, ಈ ವರ್ಗಗಳಿಗೆ ಪ್ರತ್ಯೇಕವಾಗಿ ಲಭ್ಯವಾಗುವ ರಿಕ್ತ ಸ್ಥಾನಗಳ ಸಮೂಹದಲ್ಲಿ ಕ್ರಮ 20 ರ ಒಂದು ಗುಂಪಿನಲ್ಲಿ 14ನೇ ಸ್ಥಾನವನ್ನು ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಅಭ್ಯರ್ಥಿಗಳಿಗಾಗಿ ಮೀಸಲಿರಿಸತಕ್ಕದ್ದು;

6) ಉಪ ಕಂಡಿಕೆ (3) ಮತ್ತು (4) ರಲ್ಲಿ ವಿವರಿಸಿರುವ ಕ್ರಮಗಳನ್ನು ಇನ್ನೂ ಹೆಚ್ಚಿಗೆ ಸ್ಪಷ್ಟಪಡಿಸಲು ನಿದರ್ಶನವನ್ನು ಈ ಆದೇಶದ ಅನುಬಂಧದಲ್ಲಿ ನೀಡಲಾಗಿದೆ.

7) ಮಹಿಳೆಯರಿಗೆ ಮೀಸಲಿರಿಸಿದ ರಿಕ್ತ ಸ್ಥಾನಗಳಿಗೆ ಅರ್ಹ ಮಹಿಳಾ ಅಭ್ಯರ್ಥಿಗಳು ಲಭ್ಯವಾಗದಿದ್ದಲ್ಲಿ ಅಂಥಹ ರಿಕ್ತ ಸ್ಥಾನಗಳನ್ನು ಅದೇ ವರ್ಗಕ್ಕೆ ಸೇರಿದ ಪುರುಷ ಅಭ್ಯರ್ಥಿಗಳು ಲಭ್ಯವಾಗದಿದ್ದಲ್ಲಿ ಅಂಥಹ ರಿಕ್ತ ಸ್ಥಾನಗಳನ್ನು ಅದೇ ವರ್ಗಕ್ಕೆ ಸೇರಿದ ಪುರುಷ ಅಭ್ಯರ್ಥಿಗಳಿಂದ ಭರ್ತಿ ಮಾಡತಕ್ಕದ್ದು.

8) ಮಾಜಿ ಸೈನಿಕರಿಗಾಗಿ ಮೀಸಲಿರಿಸಿದ ರಿಕ್ತ ಸ್ಥಾನಗಳಿಗೆ ಅರ್ಹ ಮಾಜಿ ಸೈನಿಕ ಅಭ್ಯರ್ಥಿಗಳು ಲಭ್ಯವಾಗದಿದ್ದಲ್ಲಿ ಅಂಥಹ ರಿಕ್ತ ಸ್ಥಾನಗಳನ್ನು ಅದೇ ವರ್ಗಕ್ಕೆ ಸೇರಿದ ಇತರೆ ಅರ್ಹ ಅಭ್ಯರ್ಥಿಗಳಿಂದ ಭರ್ತಿ ಮಾಡತಕ್ಕದ್ದು."

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಟಿ.ಕೆ. ಬಾಬುರಾವ್)
ಸರ್ಕಾರದ ಅಧೀನ ಕಾರ್ಯದರ್ಶಿ - 1,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ,
(ಸೇವಾ ನಿಯಮಗಳು).

ಗೆ,

ಸಂಕಲನಾಧಿಕಾರಿ, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು. ಇವರಿಗೆ ಇದನ್ನು ವಿಶೇಷ ರಾಜ್ಯ ಪತ್ರದಲ್ಲಿ ಮುದ್ರಿಸಿ, 1000 ಪ್ರತಿಗಳನ್ನು ಸರ್ಕಾರದ ಅಧೀನ ಕಾರ್ಯದರ್ಶಿ - 1, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವಾ ನಿಯಮಗಳು) ಅವರಿಗೆ ಕಳುಹಿಸಲು ಕೋರಿದೆ.

ಅನುಬಂಧ—1

ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 08 ಸೇಹಿಪ್ರ 95. ದಿನಾಂಕ 20ನೇ ಜೂನ್ 1995

(1) ಪ.ಜಾ.
(2) ಸಾ.ಅ.
(3) ಪ.ಪಂ.
(4) ಸಾ.ಅ.
(5) I
(6) ಸಾ.ಅ.
(7) II (ಎ)
(8) ಸಾ.ಅ.
(9) ಪ.ಜಾ.
(10) ಸಾ.ಅ.
(11) II (ಬಿ)
(12) ಸಾ.ಅ.
(13) II (ಎ)
(14) ಸಾ.ಅ.
(15) ಪ.ಜಾ.
(16) ಸಾ.ಅ.
(17) III (ಎ)
(18) ಸಾ.ಅ.
(19) III (ಬಿ)
(20) ಸಾ.ಅ.
(21) II (ಎ)
(22) ಸಾ.ಅ.
(23) ಪ.ಜಾ.
(24) ಸಾ.ಅ.
(25) II (ಎ)
(26) ಸಾ.ಅ.
(27) ಪ.ಜಾ.
(28) ಸಾ.ಅ.
(29) II (ಎ)
(30) ಸಾ.ಅ.
(31) I
(32) ಸಾ.ಅ.
(33) ಪ.ಜಾ.
(34) ಸಾ.ಅ.
(35) II (ಬಿ)
(36) ಸಾ.ಅ.
(37) II (ಎ)
(38) ಸಾ.ಅ.
(39) ಪ.ಪಂ.
(40) ಸಾ.ಅ.
(41) ಪ.ಜಾ.
(42) ಸಾ.ಅ.
(43) III (ಬಿ)
(44) ಸಾ.ಅ.
(45) II (ಎ)
(46) ಸಾ.ಅ.
(47) III (ಎ)
(48) ಸಾ.ಅ.
(49) ಪ.ಜಾ.
(50) ಸಾ.ಅ.
(51) II (ಎ)
(52) ಸಾ.ಅ.
(53) ಪ.ಜಾ.
(54) ಸಾ.ಅ.
(55) II (ಎ)
(56) ಸಾ.ಅ.
(57) I
(58) ಸಾ.ಅ.
(59) ಪ.ಜಾ.
(60) ಸಾ.ಅ.
(61) II (ಬಿ)
(62) ಸಾ.ಅ.
(63) II (ಎ)
(64) ಸಾ.ಅ.
(65) III (ಬಿ)
(66) ಸಾ.ಅ.
(67) ಪ.ಜಾ.
(68) ಸಾ.ಅ.
(69) II (ಎ)
(70) ಸಾ.ಅ.
(71) ಪ.ಪಂ.
(72) ಸಾ.ಅ.
(73) III (ಎ)
(74) ಸಾ.ಅ.
(75) ಪ.ಜಾ.
(76) ಸಾ.ಅ.
(77) II (ಎ)
(78) ಸಾ.ಅ.
(79) I
(80) ಸಾ.ಅ.
(81) ಪ.ಜಾ.
(82) ಸಾ.ಅ.
(83) III (ಬಿ)
(84) ಸಾ.ಅ.
(85) II (ಎ)
(86) ಸಾ.ಅ.
(87) II (ಬಿ)
(88) ಸಾ.ಅ.
(89) ಪ.ಜಾ.
(90) ಸಾ.ಅ.
(91) II (ಎ)
(92) ಸಾ.ಅ.
(93) ಪ.ಜಾ.
(94) ಸಾ.ಅ.
(95) III (ಎ)
(96) ಸಾ.ಅ.
(97) II (ಎ)
(98) ಸಾ.ಅ.
(99) III (ಬಿ)
(100) ಸಾ.ಅ.

ಸ್ಪಷ್ಟೀಕರಣ

| | | | |
|---|---|---|---|
| I | — ಪ್ರವರ್ಗ — I | ಶೇಕಡ | 4 |
| II (ಎ) | — ಪ್ರವರ್ಗ — II (ಎ) | ,, | 15 |
| II (ಬಿ) | — ಪ್ರವರ್ಗ — II (ಬಿ) | ,, | 4 |
| III (ಎ) | — ಪ್ರವರ್ಗ — III (ಎ) | ,, | 4 |
| III (ಬಿ) | — ಪ್ರವರ್ಗ — III (ಬಿ) | ,, | 5 |
| ಪ. ಜಾ. | — ಪರಿಶಿಷ್ಟ ಜಾತಿ | ,, | 15 |
| ಪ. ಪಂ. | — ಪರಿಶಿಷ್ಟ ಪಂಗಡ | ,, | 3 |
| ಸಾ. ಅ. | — ಸಾಮಾನ್ಯ ಅರ್ಹತೆ | ,, | 50 |

[illegible]A/[illegible]3-GPO/2515/WPP-47/2006-2008
[illegible]ನವಣ್ಣ

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ಪತ್ರಿಕೆ

| ಭಾಗ – I | ಬೆಂಗಳೂರು, ಮಂಗಳವಾರ, ಜನವರಿ ೮, ೨೦೦೮ (ಪುಷ್ಯ ೧೮, ಶಕ ವರ್ಷ ೧೯೨೯) | ನಂ. ೨೨ |
|---|---|---|

## ಕರ್ನಾಟಕ ಸರ್ಕಾರದ ನಡವಳಿಗಳು

## ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ವಿಷಯ : ಸರ್ಕಾರಿ ಸೇವೆಗಳಿಗೆ ನೇರ ನೇಮಕಾತಿಯಲ್ಲಿ ವಿವಿಧ ಸಮತಳ ಮೀಸಲಾತಿಗಳನ್ನು ಕಾರ್ಯಗತಗೊಳಿಸುವ ಬಗ್ಗೆ.

ಓದಲಾಗಿದೆ : 1) ಸರ್ಕಾರಿ ಆದೇಶ ಸಂಖ್ಯೆ ಸಿಆಸುಇ 97 ಸೆನೆನಿ 2002, ದಿನಾಂಕ 22.11.2002.
2) ಅಡ್ವೊಕೇಟ್ ಜನರಲ್‌ರವರ ಪತ್ರ ಸಂಖ್ಯೆ 42084/ಜಿಎ/07, ದಿನಾಂಕ 1.12.2007.

ಪ್ರಸ್ತಾವನೆ :

ದಿನಾಂಕ 20.6.1995ರ ಸರ್ಕಾರಿ ಆದೇಶ ಸಂಖ್ಯೆ ಸಿಆಸುಇ 8 ಸೆಹಿಮ 95ರಲ್ಲಿ ರಾಜ್ಯ ಸರ್ಕಾರಿ ಸೇವೆಗಳಿಗೆ ಮಾಡುವ ನೇರ ನೇಮಕಾತಿಯಲ್ಲಿ ಭಾರತ ಸಂವಿಧಾನದ ಅನುಚ್ಛೇದ 16(4)ರ ಪ್ರಕಾರ ಅಳವಡಿಸಿಕೊಳ್ಳಬೇಕಾದ ಮೀಸಲಾತಿ ವಿಧಾನ ಮತ್ತು ಅದಕ್ಕಾಗಿ ಅನುಸರಿಸಬೇಕಾದ ರೋಸ್ಟರನ್ನು ನಿಗದಿಪಡಿಸಲಾಗಿದೆ. ಕರ್ನಾಟಕ ಸಿವಿಲ್ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು, 1977ರ ನಿಯಮ 9(1)ರಲ್ಲಿ ಮಾಜಿ ಸೈನಿಕರಿಗೆ ಶೇಕಡ 10ರಷ್ಟು, ನಿಯಮ 9 (1ಎ) ರಲ್ಲಿ ಅಂಗವಿಕಲರಿಗೆ ಸಮೂಹ-ಎ ಮತ್ತು ಸಮೂಹ-ಬಿ ಹುದ್ದೆಗಳಲ್ಲಿ ಶೇಕಡ 3ರಷ್ಟು ಹಾಗೂ ಸಮೂಹ-ಸಿ ಮತ್ತು ಸಮೂಹ-ಡಿ ಹುದ್ದೆಗಳಲ್ಲಿ ಶೇಕಡ 5ರಷ್ಟು, ನಿಯಮ 9(1ಎಎ) ರಲ್ಲಿ ಯೋಜನಾ ನಿರಾಶ್ರಿತರಿಗೆ ಶೇಕಡ 5 ರಷ್ಟು, ನಿಯಮ 9(1ಬಿ)ರಲ್ಲಿ ಮಹಿಳೆಯರಿಗೆ ಶೇಕಡ 30ರಷ್ಟು, ನಿಯಮ 9(1ಸಿ)ರಲ್ಲಿ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಅಭ್ಯರ್ಥಿಗಳಿಗೆ ಶೇಕಡ 5ರಷ್ಟು ಸಮತಳ ಮೀಸಲಾತಿಯನ್ನು ರಾಜ್ಯ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳಿಗೆ ಮಾಡುವ ನೇರ ನೇಮಕಾತಿಯಲ್ಲಿ ಕಲ್ಪಿಸಲಾಗಿದೆ. ಕರ್ನಾಟಕ ಗ್ರಾಮೀಣ ಅಭ್ಯರ್ಥಿಗಳಿಗಾಗಿ (ರಾಜ್ಯ ಸಿವಿಲ್ ಸೇವೆಗಳಲ್ಲಿ) ನೇಮಕಾತಿಗಳ ಅಥವಾ ಹುದ್ದೆಗಳ ಮೀಸಲಾತಿ ಅಧಿನಿಯಮ, 2000ರನ್ವಯ, ಗ್ರಾಮೀಣ ಅಭ್ಯರ್ಥಿಗಳಿಗೆ ಶೇಕಡ 25ರಷ್ಟು ಸಮತಳ ಮೀಸಲಾತಿಯನ್ನು ಕಲ್ಪಿಸಲಾಗಿದೆ. ಈ ಮೀಸಲಾತಿಯನ್ನು ಜಾರಿಗೊಳಿಸಲು ಮೇಲೆ ಓದಲಾದ ಆದೇಶದಲ್ಲಿ ಪ್ರತಿ ವರ್ಗಕ್ಕೆ ಅಂದರೆ ಸಾಮಾನ್ಯ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ I, ಪ್ರವರ್ಗ-IIA, ಪ್ರವರ್ಗ-IIB, ಪ್ರವರ್ಗ-IIIA ಮತ್ತು ಪ್ರವರ್ಗ-IIIB ಗೆ ಅನ್ವಯವಾಗುವಂತೆ 20 ಬಿಂದುಗಳ ರೋಸ್ಟರನ್ನು ನಿಗದಿಪಡಿಸಲಾಗಿರುತ್ತದೆ. ಈ ರೋಸ್ಟರಿನಲ್ಲಿ 19ನೇ ಬಿಂದುವನ್ನು ಅಂಗವಿಕಲರಿಗಾಗಿ ಗುರುತಿಸಲಾಗಿದೆ. ರಾಜ್ಯ ಉಚ್ಚ

ನ್ಯಾಯಾಲಯವು ರಿಟ್ ಅಪೀಲು ಸಂಖ್ಯೆ 364/2006ರಲ್ಲಿ ನೀಡಿರುವ ನಿರ್ದೇಶನದ ಹಿನ್ನಲೆಯಲ್ಲಿ, 20 ಬಿಂದುಗಳ ರೋಸ್ಟ... ಅಂಗವಿಕಲರಿಗಾಗಿ ಗುರುತಿಸಲಾಗಿರುವ 19ನೇ ಬಿಂದುವನ್ನು 4ನೇ ಬಿಂದುವಿಗೆ ಸ್ಥಳಾಂತರಿಸಿ ನಿಗದಿಪಡಿಸುವುದು ಅಂಗ...ಲರ ಮೀಸಲಾತಿಯನ್ನು ಜಾರಿಗೊಳಿಸುವ ಉದ್ದೇಶದಿಂದ ಸೂಕ್ತವೆಂದು ಅಡ್ವೊಕೇಟ್ ಜನರಲ್‌ರವರು ದಿನಾಂಕ 1.12.2007ರ ಪತ್ರ ಸಂಖ್ಯೆ 42084/ಜಿಎ/07ರಲ್ಲಿ ಸರ್ಕಾರಕ್ಕೆ ಸಲಹೆ ಮಾಡಿರುತ್ತಾರೆ. ಸರ್ಕಾರವು ಈ ವಿಷಯವನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ:

**ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 53 ಸೆಸೇನಿ 2007, ಬೆಂಗಳೂರು, ದಿನಾಂಕ:4.1.2008**

ಪ್ರಸ್ತಾವನೆಯಲ್ಲಿ ವಿವರಿಸಿದ ಹಿನ್ನೆಲೆಯಲ್ಲಿ, ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 97 ಸೇಸೇನಿ 2002, ದಿನಾಂಕ 22.11.2002ರಲ್ಲಿ ನಿಗದಿಪಡಿಸಲಾಗಿರುವ ರೋಸ್ಟರ್ ಬದಲಿಗೆ ಈ ಆದೇಶದ ಅನುಬಂಧದಲ್ಲಿ ನಮೂದಿಸಿದ ರೋಸ್ಟರನ್ನು ನಿಗದಿಪಡಿಸಲಾಗಿದೆ. ಈ ಆದೇಶವು ತಕ್ಷಣದಿಂದ ಜಾರಿಗೆ ಬರುತ್ತದೆ. ಈ ಆದೇಶದ ದಿನಾಂಕದ ಪೂರ್ವದಲ್ಲಿ ದಿನಾಂಕ 22.11.2002ರ ಆದೇಶದಲ್ಲಿ ನಿಗದಿಪಡಿಸಿರುವ ರೋಸ್ಟರನ್ನು ಜಾರಿಗೊಳಿಸಿದ್ದು, ಪ್ರತಿ ವರ್ಗದಡಿಯಲ್ಲಿ 20ನೆಯ ಬಿಂದುವನ್ನು ತಲುಪದಿದ್ದಲ್ಲಿ, 20ನೆಯ ಬಿಂದುವಿನವರೆಗೆ ಆ ರೋಸ್ಟರನ್ನು ಪಾಲನೆಗೊಳಿಸಿ ನಂತರ ಈ ಆದೇಶಕ್ಕೆ ಲಗತ್ತಿಸಿರುವ ರೋಸ್ಟರನ್ನು ಜಾರಿಗೊಳಿಸತಕ್ಕದ್ದು.

ಭಾರತದ ರಾಷ್ಟ್ರಪತಿಯವರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ದೇವರಾಜು
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ,
(ಸೇವಾ ನಿಯಮಗಳು-1).

ಅನುಬಂಧ

ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 53 ಸೇನೆನಿ 2007, ದಿನಾಂಕ:4.1.2008

| ಸಾಮಾನ್ಯ ಅರ್ಹತೆ | | ಪರಿಶಿಷ್ಟ ಜಾತಿ | | ಪರಿಶಿಷ್ಟ ಪಂಗಡ | | I | | II (ಎ) | | II (ಬಿ) | | III (ಎ) | | III (ಬಿ) | |
|---|---|---|---|---|---|---|---|---|---|---|---|---|---|---|---|
| 1 | | 1 | | 1 | | 1 | | 1 | | 1 | | 1 | | 1 | |
| 2 | ಮ.ಅ | 2 | ಮ.ಅ | 2 | ಮ.ಅ | 2 | ಮ.ಅ | 2 | ಮ.ಅ | 2 | ಮ.ಅ | 2 | ಮ.ಅ | 2 | ಮ.ಅ |
| 3 | ಗ್ರಾ.ಅ | 3 | ಗ್ರಾ.ಅ | 3 | ಗ್ರಾ.ಅ | 3 | ಗ್ರಾ.ಅ | 3 | ಗ್ರಾ.ಅ | 3 | ಗ್ರಾ.ಅ | 3 | ಗ್ರಾ.ಅ | 3 | ಗ್ರಾ.ಅ |
| 4 | ಅಂ.ವಿ | 4 | ಅಂ.ವಿ | 4 | ಅಂ.ವಿ | 4 | ಅಂ.ವಿ | 4 | ಅಂ.ವಿ | 4 | ಅಂ.ವಿ | 4 | ಅಂ.ವಿ | 4 | ಅಂ.ವಿ |
| 5 | ಮ.ಅ | 5 | ಮ.ಅ | 5 | ಮ.ಅ | 5 | ಮ.ಅ | 5 | ಮ.ಅ | 5 | ಮ.ಅ | 5 | ಮ.ಅ | 5 | ಮ.ಅ |
| 6 | ಗ್ರಾ.ಅ | 6 | ಗ್ರಾ.ಅ | 6 | ಗ್ರಾ.ಅ | 6 | ಗ್ರಾ.ಅ | 6 | ಗ್ರಾ.ಅ | 6 | ಗ್ರಾ.ಅ | 6 | ಗ್ರಾ.ಅ | 6 | ಗ್ರಾ.ಅ |
| 7 | | 7 | | 7 | | 7 | | 7 | | 7 | | 7 | | 7 | |
| 8 | ಮ.ಅ | 8 | ಮ.ಅ | 8 | ಮ.ಅ | 8 | ಮ.ಅ | 8 | ಮ.ಅ | 8 | ಮ.ಅ | 8 | ಮ.ಅ | 8 | ಮ.ಅ |
| 9 | ಗ್ರಾ.ಅ | 9 | ಗ್ರಾ.ಅ | 9 | ಗ್ರಾ.ಅ | 9 | ಗ್ರಾ.ಅ | 9 | ಗ್ರಾ.ಅ | 9 | ಗ್ರಾ.ಅ | 9 | ಗ್ರಾ.ಅ | 9 | ಗ್ರಾ.ಅ |
| 10 | ಮಾ.ಸೈ | 10 | ಮಾ.ಸೈ | 10 | ಮಾ.ಸೈ | 10 | ಮಾ.ಸೈ | 10 | ಮಾ.ಸೈ | 10 | ಮಾ.ಸೈ | 10 | ಮಾ.ಸೈ | 10 | ಮಾ.ಸೈ |
| 11 | | 11 | | 11 | | 11 | | 11 | | 11 | | 11 | | 11 | |
| 12 | ಮ.ಅ | 12 | ಮ.ಅ | 12 | ಮ.ಅ | 12 | ಮ.ಅ | 12 | ಮ.ಅ | 12 | ಮ.ಅ | 12 | ಮ.ಅ | 12 | ಮ.ಅ |
| 13 | ಗ್ರಾ.ಅ | 13 | ಗ್ರಾ.ಅ | 13 | ಗ್ರಾ.ಅ | 13 | ಗ್ರಾ.ಅ | 13 | ಗ್ರಾ.ಅ | 13 | ಗ್ರಾ.ಅ | 13 | ಗ್ರಾ.ಅ | 13 | ಗ್ರಾ.ಅ |
| 14 | ಕಮಾಅ | 14 | ಕಮಾಅ | 14 | ಕಮಾಅ | 14 | ಕಮಾಅ | 14 | ಕಮಾಅ | 14 | ಕಮಾಅ | 14 | ಕಮಾಅ | 14 | ಕಮಾಅ |
| 15 | ಮ.ಅ | 15 | ಮ.ಅ | 15 | ಮ.ಅ | 15 | ಮ.ಅ | 15 | ಮ.ಅ | 15 | ಮ.ಅ | 15 | ಮ.ಅ | 15 | ಮ.ಅ |
| 16 | ಗ್ರಾ.ಅ | 16 | ಗ್ರಾ.ಅ | 16 | ಗ್ರಾ.ಅ | 16 | ಗ್ರಾ.ಅ | 16 | ಗ್ರಾ.ಅ | 16 | ಗ್ರಾ.ಅ | 16 | ಗ್ರಾ.ಅ | 16 | ಗ್ರಾ.ಅ |
| 17 | ಯೋ.ಅ | 17 | ಯೋ.ಅ | 17 | ಯೋ.ಅ | 17 | ಯೋ.ಅ | 17 | ಯೋ.ಅ | 17 | ಯೋ.ಅ | 17 | ಯೋ.ಅ | 17 | ಯೋ.ಅ |
| 18 | ಮ.ಅ | 18 | ಮ.ಅ | 18 | ಮ.ಅ | 18 | ಮ.ಅ | 18 | ಮ.ಅ | 18 | ಮ.ಅ | 18 | ಮ.ಅ | 18 | ಮ.ಅ |
| 19 | | 19 | | 19 | | 19 | | 19 | | 19 | | 19 | | 19 | |
| 20 | ಮಾ.ಸೈ | 20 | ಮಾ.ಸೈ | 20 | ಮಾ.ಸೈ | 20 | ಮಾ.ಸೈ | 20 | ಮಾ.ಸೈ | 20 | ಮಾ.ಸೈ | 20 | ಮಾ.ಸೈ | 20 | ಮಾ.ಸೈ |

ಟಿಪ್ಪಣಿ : ಇದೇ ಕ್ರಮವನ್ನು ಒಂದು ನೂರು ರಿಕ್ತ ಸ್ಥಾನಗಳನ್ನು ಭರ್ತಿ ಮಾಡುವವರೆಗೆ ಮುಂದುವರೆಸತಕ್ಕದ್ದು. ನಂತರ ಪುನರಾವರ್ತಿಸತಕ್ಕದ್ದು.

ಮ.ಅ. - ಮಹಿಳಾ ಅಭ್ಯರ್ಥಿ

ಯೋ.ಅ. - ಯೋಜನೆಗಳಿಂದ ನಿರಾಶ್ರಿತಗೊಂಡ ಅಭ್ಯರ್ಥಿ

ಮಾ.ಸೈ. - ಮಾಜಿ ಸೈನಿಕರು

ಗ್ರಾ.ಅ. - ಗ್ರಾಮೀಣ ಅಭ್ಯರ್ಥಿ

ಅಂ.ವಿ. - ಅಂಗವಿಕಲ ಅಭ್ಯರ್ಥಿ

ಕ.ಮಾ.ಅ. - ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಅಭ್ಯರ್ಥಿ

ದೇವರಾಜು

ಸರ್ಕಾರದ ಅಧೀನ ಕಾರ್ಯದರ್ಶಿ,

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, (ಸೇವಾ ನಿಯಮಗಳು-1).

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು - 01